ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎನ್ ವಕೀಲರಿಂದಃ-

ನನ್ನ ಹೆಸರಿಲ್ಲಿ ಯಾವುದೇ ಪಡಿತರ ಚೀಟಿ ಇರುವುದಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ಪಡಿತರ ಚೀಟಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಸಿಡಿರುತ್ತೇನೆ. ನನ್ನ ತಾಯಿಯ ಹೆಸರಿನಲ್ಲಿ ಇರುವ ಪಡಿತರ ಚೀಟಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ರೇಷನ್ ಕಾರ್ಡ್ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ತಾಯಿಯ ಹೆಸರಿನಲ್ಲಿ ಈಗ ಯಾವುದೇ ಚುನಾವಣಾ ಗುರುತಿನ ಚೀಟಿ ಇರುವುದಿಲ್ಲ, ದಾವಾ ಆಸ್ತಿಯ ಸರ್ವೇ ನಂಬರ್ 32/2 ಇರುತ್ತದೆ. ಅದರ ಒಟ್ಟು ವಿಸ್ತೀರ್ಣ 9 ಎಕರೆ ಚಿಲ್ಲರೆ ಇರುತ್ತದೆ. ದಾವಾ ಆಸ್ತಿಯನ್ನು ನನ್ನ ತಾತ ತಿಮ್ಮಯ್ಯನವರು ಖರೀದಿ ಮಾಡಿದ್ದರು. 9 ಎಕರೆ ಜಮೀನು ನನ್ನ ತಾತನ ಹೆಸರಿನಲ್ಲಿ ಇದೆ ಎಂದು ತೋರಿಸಲು ಇಸಿ ಮತ್ತು ಮ್ಯೂಟೇಷನ್ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ದಾವೆಯನ್ನು 27 ಗುಂಟೆ ಸ್ವತ್ತಿಗೆ ಹಾಕಿರುತ್ತೇನೆ. 27 ಗುಂಟೆ ಜಮೀನಿನ ಪೂರ್ವಕ್ಕೆ ಮೂಡಲಪ್ಪ ಮತ್ತು ನರಸಿಂಹಯ್ಯನವರ ಸ್ವತ್ತು, ಪಶ್ಚಿಮಕ್ಕೆ ಸರ್ಕಾರಿ ಓಣಿ ದಾರಿ, ಉತ್ತರಕ್ಕೆ ಗೋವಿಂದಪ್ಪ ಮತ್ತು ಜಯಮ್ಮನವರ ಸ್ವತ್ತು ಮತ್ತು ದಕ್ಷಿಣಕ್ಕೆ ಮೂಡಲಪ್ಪ ಮತ್ತು ತಿಮ್ಮಯ್ಯನವರ ಜಮೀನು ಇರುತ್ತದೆ. ನನ್ನ ದಾವಾ ಪತ್ರದಲ್ಲಿ ದಾವಾ ಷಡ್ಯೂಲ್ ಸ್ವತ್ತು 1 ಎಕರೆ 11ವರೆ ಗುಂಟೆ ಎಂದು ಬರೆಸಿದ್ದೇನೆ ಎಂದರೆ ಸರಿ. 1 ಎಕರೆ 11ವರೆ ಗುಂಟೆ ಸ್ವತ್ತಿನನ ಪೂರ್ವಕ್ಕೆ

ನರಸಿಂಹಯ್ಯನವರ ತಂದೆ ಮೂಡಲಪ್ಪನ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಓಣಿ, ಉತ್ತರಕ್ಕೆ ಕಾಳಮ್ಮನ ಜಮೀನು ಮತ್ತು ದಕ್ಷಿಣಕ್ಕೆ ಮೂಡಲಪ್ಪ ಮತ್ತು ತಿಮ್ಮಯ್ಯನವರ ಜಮೀನು ಇರುತ್ತದೆ. ಮೇಲೆ ಹೇಳಿದ ಚಕ್‌ಬಂದಿಗೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಸುಳ್ಳು ಹೇಳುತ್ತಿದೆದ್ದೇನೆ ಎಂದರೆ ಸರಿಯಲ್ಲ, ನನ್ನ ಚಿಕ್ಕಪ್ಪಂದಿರು ಮತ್ತು ದೊಡ್ಡಪ್ಪಂದಿರು ಭಾಗ ಮಾಡಿಕೊಂಡಿದ್ದರು. ನನ್ನ ಚಿಕ್ಕಪ್ಪ ಗೋವಿಂದಪ್ಪ ಜಯಮ್ಮನವರಿಗೆ 27 ಗುಂಟೆ, ನನ್ನ ತಂದೆ ಮತ್ತು ತಾಯಿಗೆ 27 ಗುಂಟೆ ಭಾಗಾಂಶದಲ್ಲಿ ಬಂದಿರುತ್ತದೆ. ಭಾಗದ ಪಟ್ಟಿಯ ಪ್ರಕಾರ ಚಕ್‌ಬಂದಿಯನ್ನು ಗುರುತಿಸಿಕೊಳ್ಳಲು ಬರವಣಿಗೆ ಮಾಡಿಕೊಂಡಿರುವುದಿಲ್ಲ. ನನ್ನ ಚಿಕ್ಕಪ್ಪ ಗೋವಿಂದಪ್ಪನವರಿಗೆ ನಮ್ಮ ತಂದೆಯ ಭಾಗಕ್ಕೆ ಬಂದ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದು ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಮಾರಾಟ ಮಾಡಿರುವ ಬಗ್ಗೆ ಕ್ರಯ ಪತ್ರ ಇರುವುದಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ಬೆಂಗಳೂರಿಗೆ ಹೊರಟು ಹೋಗಿರುತ್ತೇವೆ ಎಂದು ಬರೆಸಿರುತ್ತೇವೆ ಎಂದು ಕೇಳಿದಾಗ ಸಾಕ್ಷಿಯು ನನ್ನ ಚಿಕ್ಕಪ್ಪ ಯಾವುದೇ ದಾಖಲೆ ಮಾಡಿಕೊಟ್ಟಿಲ್ಲ ಹಣ ನನಗೆ ವಾಪಸ್ಸು ಕೊಟ್ಟರು ಅದ್ದರಿಂದ ನಾನೇ ಸ್ವಾಧೀನದಲ್ಲಿ ಇರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಚಿಕ್ಕಪ್ಪನವರಿಗೆ ನಾನು ಹಣ ಕೊಟ್ಟಿರುವ ಬಗ್ಗೆ ನಾನು ದಾಖಲೆ ಮಾಡಿಕೊಂಡಿರುವುದಿಲ್ಲ ಆದರೆ ಅವರು ನನಗೆ ಹಣವನ್ನು ವಾಪಸ್ಸು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಕುಮಾರ ರವರ ಹೆಸರಿಗೆ ದಾವಾ ಆಸ್ತಿಯ ಖಾತೆ ಆಗಿರುವ ವಿಚಾರ ನನಗೆ 2013ರಲ್ಲಿ ತಿಳಿದಿರುತ್ತದೆ. 1996-1997ರಲ್ಲಿ ಖಾತೆ ಬದಲಾವಣೆಯಾಗಿದೆ. ನಾನು ಸದರಿ ಖಾತೆ ವಜಾ ಕೋರಿ ಎಸಿ ನ್ಯಾಯಾಲಯದಲ್ಲಿ ಅಪೀಲು ಹಾಕಿಕೊಂಡಿದ್ದೇನು ಎಂದರೆ ಸರಿ. ಸದರಿ ಅಪೀಲು ವಜಾ ಮಾಡಿ ಸಿವಿಲ್

ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ನಾನು ಕಂದಾಯ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ ಕುಮಾರ್ ನನಗೆ ಬುದ್ದಿ ಬಂದಾಗಿನಿಂದ ಒಂದೇ ಊರಿನವರಾಗಿರುವ ಕಾರಣ ಪರಿಚಯ ಇದೆ.

ಸರ್ವೇ ನಂಬರ್ 32/2ರ 27 ಗುಂಟೆ ಮೂಲವಾಗಿ ಕಾಳಮ್ಮನವರು ದಿನಾಂಕ 28.10.1954ರಲ್ಲಿ ಖರೀದಿಸಿರುವ ಸ್ವತ್ತು ಎಂದರೆ ಸರಿಯಲ್ಲ. ಕಾಳಮ್ಮನವರ ಹೆಸರಿಗೆ ಖಾತೆ ಪಹಣಿ ಆಗಿತ್ತು ಎಂದರೆ ಸಾಕ್ಷಿ ಅದು ಬೇರೆ ಸ್ವತ್ತಿಗೆ ಎಂದು ನುಡಿಯುತ್ತಾರೆ. ಅದರ ಸರ್ವೇ ನಂಬರ್ 31 ಮತ್ತು 37 ಆಗಿರುತ್ತದೆ ನಮ್ಮ ಜಮೀನು 32/2 ಆಗಿರುತ್ತದೆ ಎಂದು ಸಾಕ್ಷಿ ನುಯುತ್ತಾರೆ. ಅವರ ಜಮೀನಿನ ಸರ್ವೇ ನಂಬರ್ 31 ಮತ್ತು 37 ಮತ್ತು ನನ್ನ ಜಮೀನು 32/2 ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆಗಳ್ಳು ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಕಾಳಮ್ಮನವರಿಗೆ ತಿರುಮಲಪ್ಪ ಮತ್ತು ಮೂಡಲಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಕಾಳಮ್ಮನ ಇಬ್ಬರು ಮಕ್ಕಳು ಭಾಗ ಮಾಡಿಕೊಂಡ ನಂತರ 1ನೇ ಪ್ರತಿವಾದಿಯ ತಾಯಿಗೆ 32/2ರಲ್ಲಿ 27 ಗುಂಟೆ ಜಮೀನು ಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ತಿಮ್ಮಕ್ಕನವರು ತೀರಿಕೊಂಡ ನಂತರ ಕುಮಾರ್ ರವರ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸರಿ. ಆಗಿನಿಂದ ಇಲ್ಲಿಯವರಗೆ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಲೋನ್ ಪಡೆದುಕೊಂಡು

ದಾವಾ ಆಸ್ತಿಯನ್ನು ಅಭಿವೃದ್ದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಸ್ವಾ ಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ಗಿರಿಯಪ್ಪ ನನ್ನ ಚಿಕ್ಕಪ್ಪ. ಸದರಿ ಗಿರಿಯಪ್ಪನವರು ಓ.ಎಸ್. 415/2014ರಂತೆ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿ ಆದರೆ ಅದು ಬೇರೆ ಸ್ವತ್ತಿನ ಮೇಲೆ ಹಾಕಿರುವ ದಾವೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ದಾವೆಯಲ್ಲಿ ನನ್ನನ್ನು ಮತ್ತು ನನ್ನ ಕುಟುಂಬದವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಓ.ಎಸ್. 415/2014ರಲ್ಲಿ ದಾವೆಯನ್ನು ಸರ್ವೇ ನಂಬರ್ 32/3ರ ಸ್ವತ್ತಿಗೆ ಹಾಕಿರುತ್ತಾರೆ ಎಂದರೆ ಸರಿ. ಸರ್ವೇ ನಂಬರ್ 32/3ರ 1 ಎಕರೆ 14 ಗುಂಟೆ ಸ್ವತ್ತಿನ ಚಕ್‌ಬಂದಿ ಪೂರ್ವಕ್ಕೆ ಸರ್ಕಾರಿ ಜಮೀನು, ಪಶ್ಚಿಮಕ್ಕೆ ಕುಳ್ಳಯ್ಯನ ಜಮೀನು, ಉತ್ತರಕ್ಕೆ ರಾಮಯ್ಯನವರ ಜಮೀನು ಮತ್ತು ದಕ್ಷಿಣಕ್ಕೆ ಕೃಷ್ಣಪ್ಪನವರ ಜಮೀನು ತೋರಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.